ದೇವಾಲಯಗಳಿಗೆ ಅನುದಾನ

130 (174) ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1997-98ನೇ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ; ಇದರಲ್ಲಿ ಆರಾಧನಾ ಯೋಜನೆಗೆ ಎಷ್ಟು; ನಿಗದಿಪಡಿಸಲಾಗಿದೆ.

ಆ) ಈ ಅನುದಾನವನ್ನು ಮಾರ್ಚ್ 31ರ ಒಳಗೆ ಎಲ್ಲಾ ದೇವಸ್ಥಾನಗಳಿಗೆ ಬಿಡುಗಡೆ ಗೊಳಿಸಲಾಗುವುದೇ; ಸರ್ಕಾರದಿಂದ ಸಿಗುವ ಹಣ ಸಕಾಲಕ್ಕೆ ಸಿಗದೆ ಮತ್ತು ಬಹಳಷ್ಟು ದೇವಸ್ಥಾನಗಳ ದುರಸ್ಥಿ ಕಾರ್ಯ ಅರ್ಧದಲ್ಲಿ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)

ಅ) 1997-98ನೇ ಸಾಲಿನಲ್ಲಿ ಜೀರ್ಣೋದ್ಧಾರ, ನಿರ್ಮಾಣ ಮತ್ತು ಆರಾಧನಾ ಯೋಜನೆಗೆ ಈ ಕೆಳಕಂಡಂತೆ ಹಣ ನಿಗದಿಪಡಿಸಲಾಗಿದೆ.

ವರ್ಷ	ಜೀರ್ಣೋದ್ಧಾರ	ನಿರ್ಮಾಣ	ಆರಾಧನಾ
1997-98	1.42 ಕೋಟಿ	1.05 ಕೋಟಿ	5.00 ಕೋಟಿ

ಆ) ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು.

ಬೆಂಗಳೂರು ಮಲ್ಲೇಶ್ವರಂನ 15ನೇ ಕ್ರಾಸ್‌ನ ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ಸೇರಿದ ಅಂಗರಗಳು

131(177) ಶ್ರೀ ಯು. ಆರ್. ಸಭಾಪತಿ (ಉಡುಪಿ):- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಲ್ಲೇಶ್ವರಂನ 5ನೇ ಕ್ರಾಸ್‌ನ ಕಾಡು ಮಲ್ಲೇಶ್ವರ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ 1997-98ನೇ ಸಾಲಿನಲ್ಲಿ ಎಷ್ಟು ಅಂಗಡಿಗಳನ್ನು ಕಟ್ಟಲಾಗಿದೆ;

ಆ) ಈ ಅಂಗಡಿಗಳನ್ನು ಗುತ್ತಿಗೆಗೆ ಅಥವಾ ಬಾಡಿಗೆಗೆ ನೀಡಲಾಗಿದೆಯೇ; ನೀಡಲಾಗಿದ್ದಲ್ಲಿ ಅನುಸರಿಸಿದ ನಿಯಮಗಳೇನು; ಹಾಗೂ ಬಂದಿರುವ ಬಾಡಿಗೆ ಹಣ ಎಷ್ಟು;

ಇ) ದಿನಪತ್ರಿಕೆಯಲ್ಲಿ ಜಾಹಿರಾತು ಕೊಟ್ಟಿದ್ದಲ್ಲಿ; ಇದಕ್ಕಿಂತ ಜಾಸ್ತಿ ಬಾಡಿಗೆ ಸಿಗುತ್ತಿರಲಿಲ್ಲವೇ;

ಈ) ಇಷ್ಟು ಕಡಿಮೆ ಬಾಡಿಗೆಗೆ ಕೊಡಲು ಕಾರಣಗಳೇನು; ವಿವರ ನೀಡುವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)